ಅಧ್ಯಕ್ಷರು:– ಮಾನ್ಯ ನರೇಂದ್ರ ಬಾಬುರವರು

ಶ್ರೀ ರೇವುನಾಯಕ್ ಬೆಳಮಗಿ:– ಮಾನ್ಯ ಅಧ್ಯಕ್ಷರೆ, ನನಗೆ ಉತ್ತರ ಕೊಡಿಸಿ.

ಅಧ್ಯಕ್ಷರು:– ಕೊಡಿಸುತ್ತಾರೆ ಕುಳಿತುಕೊಳ್ಳಿ ರೇವುನಾಯಕ್ ರವರ ಸೂಚನೆ ಹೋಗಿಲ್ಲ ಎಂದು ಕಾಣುತ್ತದೆ. ಈಗ ಕೊಟ್ಟಿದ್ದಾರಾ? ಆಮೇಲೆ ಕೊಡುತ್ತಾರೆ ಈಗ ಮಾನ್ಯ ನರೇಂದ್ರಬಾಬು ಮಾನ್ಯ ನೆಹರು ಓಲೆಕಾ ಹೇಳಿ.

(ಋೂ) ವಿಷಯ : ರೈತರ ಮೇಲೆ ಇರುವಂತಹ ಕೇಸುಗಳನ್ನು ಹಿಂದಕ್ಕೆ ಪಡೆಯುವ ಬಗ್ಗೆ.

ಶ್ರೀ ನೆಹರು ಚನ್ನಬಸಪ್ಪ ಓಲೆಕಾರ್ (ಬ್ಯಾಡಗಿ):– ಮಾನ್ಯ ಅಧ್ಯಕ್ಷರೆ, ರೈತರ ಮೇಲೆ ಇರುವಂತಹ ಕೇಸುಗಳನ್ನು ತೆಗೆದು ಹಾಕುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಇದ್ದಾಗ ಮಾತನಾಡುವುದಕ್ಕೆ ನನಗೆ ಅವಕಾಶವನ್ನು ಕೊಡಿ ಎಂದು ಕೇಳಿದಾಗ, ಆಗ ನನಗೆ ಅವಕಾಶ ಸಿಗಲಿಲ್ಲ. ಈಗ ಈ ಸದನದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಇಲ್ಲ ಹಾಗೂ ಮಾನ್ಯ ಉಪ ಮುಖ್ಯಮಂತ್ರಿಗಳೂ ಇಲ್ಲ. ಆ ರೈತರ ಮೇಲಿರುವ ಕೇಸುಗಳನ್ನು ತೆಗೆದು ಹಾಕುವ ವಿಚಾರವನ್ನೂ ಹಿಂದಿನ ಅಧಿವೇಶನದಲ್ಲಿ ಪ್ರಸ್ತಾಪ ಮಾಡಿದಾಗ ಆ ಕೇಸುಗಳನ್ನು ಕೂಡಲೆ ತೆಗೆದು ಹಾಕುವಂತಹ ವ್ಯವಸ್ಥೆಯನ್ನು ಮಾಡುತ್ತೇವೆ ಎಂದು ಮಾನ್ಯ ಕಂದಾಯ ಮಂತ್ರಿಗಳು ಹೇಳಿದ್ದರು. ಆದರೆ ಇಲ್ಲಿಯವರೆಗೂ ಆ ಕೆಲಸವಾಗಿಲ್ಲ. ಆದರೆ ಈಗ ಇಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಉಪ ಮುಖ್ಯಮಂತ್ರಿಗಳು ಇಲ್ಲದೆ ಇದ್ದಾಗ ಪ್ರಸ್ತಾಪ ಮಾಡಿದರೂ ಕೂಡ ಯಾವುದೇ ಪ್ರಯೋಜನ ಆಗುವುದಿಲ್ಲವೆಂದು ನಾನು ಭಾವಿಸಿದ್ದೇನೆ. ಅದಕ್ಕಾಗಿ ನಾನು ಈಗ ಒಂದು ವಿಚಾರವನ್ನು ಹೇಳುತ್ತೇನೆ. ನನ್ನ ಕ್ಷೇತ್ರದಲ್ಲಿ ಒಂದು ಕೋಟೆಬೆನ್ನೂರು ಪ್ರೌಢಶಾಲೆಯಲ್ಲಿ 12 ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಹೋಗಲು ಬೇಕಾದಂತಹ ಹಾಲ್‌ಟಿಕೇಟ್ ಬಂದಿಲ್ಲ. ಅದಕ್ಕೆ ತಾವು ಪ್ರಸ್ತಾಪ ಮಾಡುವುದಕ್ಕೆ ಅವಕಾಶವನ್ನು ಕೊಟ್ಟರೆ, ಆ ವಿಷಯವನ್ನು ಸದನದಲ್ಲಿ ನಾನು ಪ್ರಸ್ತಾಪ ಮಾಡಲು ನಾನು ಬಯಸುತ್ತೇನೆ.

ಡಾ: ಹೆಚ್. ಸಿ. ಮಹದೇವಪ್ಪ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು):– ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ರೈತರ ಮೇಲೆ ನ್ಯಾಯಾಲಯದಲ್ಲಿ 427 ಮೊಕದ್ದಮ್ಮೆಗಳನ್ನು ಹೂಡಲಾಗಿದೆ. ಅವುಗಳಲ್ಲಿ 131 ಪ್ರಕರಣಗಳನ್ನು ಸರ್ಕಾರವು ಹಿಂದಕ್ಕೆ ಪಡೆದಿದೆ. ಮೈಸೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ದಾಖಲಾಗಿರುವ ಪ್ರಕರಣಗಳಲ್ಲಿ ತಲಾ ಒಂದೊಂದು ಪ್ರಕರಣ ಖುಲಾಸೆಯಾಗಿದ್ದು, ಬೀದರ್ ಜಿಲ್ಲೆಯಲ್ಲಿ ಒಂದು ಪ್ರಕರಣಕ್ಕೆ ಸಂಬಂಧಿಸಿದಂತೆ 'ಬಿ' ಅಂತಿಮ ವರದಿಯನ್ನು ಸಲ್ಲಿಸಲಾಗಿದೆ. ಜಿಲ್ಲಾವಾರು ರೈತರ ಮೇಲೆ ಹೂಡಲಾಗಿರುವ ಪ್ರಕರಣಗಳು ಮತ್ತು ಹಿಂದೆ ಪಡೆದಿರುವ ಪ್ರಕರಣಗಳು ಈ ರೀತಿಯಾಗಿವೆ. ಬೆಂಗಳೂರು ನಗರ ಪ್ರಕರಣಗಳ ಸಂಖ್ಯೆ 2, ಪ್ರಕರಣ ಹಿಂದಕ್ಕೆ ಪಡೆದಿರುವುದು ಒಂದು. ರೈಲ್ವೆದು 3 ಪ್ರಕರಣ ಬೆಂಗಳೂರು ಜಿಲ್ಲೆಯದ್ದು ಮೂರು ಪ್ರಕರಣಗಳು, ತುಮಕೂರು

ಜಿಲ್ಲೆಯದ್ದು 10 ಪ್ರಕರಣಗಳು, ಅದರಲ್ಲಿ ಹಿಂದಕ್ಕೆ ಪಡೆದಿರುವುದು 5 ಪ್ರಕರಣಗಳು. ಕೋಲಾರದಲ್ಲಿ ಒಂದು ಪ್ರಕರಣ ರಾಯಚೂರು ಜಿಲ್ಲೆಯಲ್ಲಿ 10 ಪ್ರಕರಣ, ಅದರಲ್ಲಿ ಹಿಂದಕ್ಕೆ ಪಡೆದಿರುವುದು 7 ಪ್ರಕರಣ ಮಂಡ್ಯ 106 ಪ್ರಕರಣಗಳು ಇದ್ದು, ಅದರಲ್ಲಿ ಹಿಂದಕ್ಕೆ ಪಡೆದಿರುವಂತಹ ಪ್ರಕರಣಗಳು 88 ಹಾಸನದಲ್ಲಿ 14 ಪ್ರಕರಣ, ಚಾಮರಾಜನಗರದಲ್ಲಿ 13 ಪ್ರಕರಣಗಳಲ್ಲಿ ಹಿಂದೆ ಪಡೆದಿರುವುದು 8 ಪ್ರಕರಣ. ಬೆಳಗಾಂನಲ್ಲಿ 4 ಪ್ರಕರಣ, ಅದರಲ್ಲಿ ಹಿಂದೆ ಪಡೆದಿರುವುದು ಎಂದು. ಬಿಜಾಪುರದಲ್ಲಿ 11 ಪ್ರಕರಣ, ಧಾರವಾಡದಲ್ಲಿ 44 ಪ್ರಕರಣಗಳು, ಹಾವೇರಿ 2 ಪ್ರಕರಣಗಳು ಚಿತ್ರದುರ್ಗದಲ್ಲಿ 59 ಪ್ರಕರಣಗಳು, ಬಳ್ಳಾರಿಯಲ್ಲಿ 2 ಪ್ರಕರಣಗಳು, ಶಿವಮೊಗ್ಗದಲ್ಲಿ 85 ಪ್ರಕರಣಗಳು, ಅದರಲ್ಲಿ ಹಿಂದೆ ಪಡೆದಿರುವುದು 5 ಪ್ರಕರಣಗಳು. ದಾವಣಗೆರೆ 22 ಪ್ರಕರಣಗಳು ಅದರಲ್ಲಿ ಹಿಂದೆ ಪಡೆದಿರುವುದು 6 ಪ್ರಕರಣಗಳು. ಉತ್ತರ ಕನ್ನಡದಲ್ಲಿ 3 ಪ್ರಕರಣ, ಚಿಕ್ಕಮಗಳೂರಿನಲ್ಲಿ 3 ಪ್ರಕರಣ, ಅದರಲ್ಲಿ ಹಿಂದೆ ಪಡೆದಿರುವುದೂ ಕೂಡ 3 ಪ್ರಕರಣಗಳು. ಗುಲ್ಬರ್ಗಾ 7 ಬೀದರ್ 7, ರಾಯಚೂರು 11 ಹಿಂದೆ ಪಡೆದಿರುವಂಥಾದ್ದು 1, ಕೊಪ್ಪಳ 5 ಹಿಂದೆ ಪಡೆದಿರುವಂಥಾದ್ದು 5, ಒಟ್ಟು 427 ಪ್ರಕರಣಗಳಲ್ಲಿ ಹಿಂದೆ ಪಡೆದಿರುವಂಥಾದ್ದು 131, ಕ್ರಿಮಿನಲ್ ಇರುವಂಥಾದ್ದನ್ನು ಹಿಂದೆ ಪಡೆಯುವುದಕ್ಕೆ ಆಗುವುದಿಲ್ಲ. ಇದರ ಬಗ್ಗೆ ಕೇಸ್ ನಡೆಯುತ್ತಿದೆ.

ಶ್ರೀ ಓಲೆಕಾರ್ ನೆಹರು ಚೆನ್ನಬಸಪ್ಪ.– ಮಾನ್ಯ ಅಧ್ಯಕ್ಷರೇ, ಇನ್ನು ಉಳಿದ ಕೇಸ್‌ಗಳನ್ನು ಯಾವಾಗ ಹಿಂದಕ್ಕೆ ಪಡೆಯುತ್ತಾರೆಂಬುದನ್ನು ತಿಳಿಸಬೇಕು. ದಯವಿಟ್ಟು ಹೇಳಲಿ.

ಅಧ್ಯಕ್ಷರು:– ಪ್ರಶ್ನೆಯನ್ನು ಕೇಳುವುದಕ್ಕೆ ಅವಕಾಶವಿಲ್ಲ

(ಎ) ವಿಷಯ : ಕಿತ್ತೂರಿಗೆ ಪಟ್ಟಣ ಪಂಚಾಯತ್ ಸ್ಥಾನಮಾನವನ್ನು ನೀಡುವ ಬಗ್ಗೆ.

ಈ ಭಾಷಣವು ಮಾನ್ಯ ಸದಸ್ಯರಿಂದ ಪರಿಶೀಲಿಸಲ್ಪಟ್ಟಿದೆ.

ಶ್ರೀ ಮರಿಹಾಳ್ ಸುರೇಶ್ ಶಿವರುದ್ರಪ್ಪ (ಕಿತ್ತೂರು):– ಮಾನ್ಯ ಅಧ್ಯಕ್ಷರೇ, ಬೆಳಗಾಂ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ಕಿತ್ತೂರು ಪಟ್ಟಣವೂ ಐತಿಹಾಸಿಕ ಹಿನ್ನೆಲೆಯುಳ್ಳ ನಾಡಾಗಿದ್ದು, ಸ್ವಾತಂತ್ರ್ಯ ಬೆಳ್ಳಿಚುಕ್ಕೆ ವೀರರಾಣಿ ಕಿತ್ತೂರು ಚೆನ್ನಮ್ಮನವರ ರಾಜಧಾನಿಯಾಗಿತ್ತು. ಈ ರಾಜ್ಯವನ್ನು ವಶಪಡಿಸಿಕೊಳ್ಳಲು, ಆಗಿನ ಬ್ರಿಟಿಷ್ ಸರ್ಕಾರ ನಡೆಸಿದ ಹೋರಾಟದ ಬಗ್ಗೆ ತಮಗೆಲ್ಲಾ ತಿಳಿದಿದೆ. 1927ರಲ್ಲಿ ಮೊಟ್ಟಮೊದಲಿಗೆ ಗ್ರಾಮ ಪಂಚಾಯತ್‌ಯೆಂದು ಸ್ಥಾಪನೆಯಾದ ಕಿತ್ತೂರು, ತದನಂತರ 1960ರಲ್ಲಿ ಪಟ್ಟಣ ಪಂಚಾಯತ್ ಎಂದು, 1987ರಲ್ಲಿ ಮಂಡಲ ಪಂಚಾಯತ್ ಎಂದು ಬಡ್ತಿಯನ್ನು ಪಡೆಯಿತು. ಆದರೆ 1994 ರಿಂದ ಇಲ್ಲಿಯವರೆಗೆ ಗ್ರಾಮ ಪಂಚಾಯತ್ ಎಂದು ಕೆಳದರ್ಜೆಗೆ ಇಳಿಸಲಾಯಿತು. 2001ನೇ ಜನ ಗಣತಿಯ ಪ್ರಕಾರ, ಕಿತ್ತೂರು ಪಟ್ಟಣದ ಜನಸಂಖ್ಯೆಯು 16,110 ಇದೆ. ಕಿತ್ತೂರು ತಾಲ್ಲೂಕು ರಚನೆಯ ಸಲುವಾಗಿ, ನಾಡಿನ ಜನತೆಯ ಹೋರಾಟದ ಫಲವಾಗಿ ಹಿಂದಿನ ಸರ್ಕಾರದ ಶ್ರೀ ಎಸ್. ಎಂ. ಕೃಷ್ಣರವರ ಘನ ಸರ್ಕಾರವು, ದಿನಾಂಕ: 5.3.2003 ರಂದು ಕಿತ್ತೂರಿಗೆ ವಿಶೇಷ ತಹಸೀಲ್ದಾರರನ್ನು ನಿಯುಕ್ತಿಗೊಳಿಸಿತ್ತು. ಉಪ